ಮುಂದಕ್ಕೂ ಹೋಗಲಾರದೇ ಹಿಂದಕ್ಕೂ ಬರಲಾಗದೇ ಅಲ್ಲಿಯೇ ರಾತ್ರಿಯನ್ನು ಕಳೆಯುವುದೆಂದು ನಿರ್ಧರಿಸಿದೆವು. ಅದಕ್ಕೆ ಪೂರಕವೆಂಬಂತೆ ಮತ್ತೆ ನೋವು ಕಾಣಿಸಿಕೊಳ್ಳಬೇಕೇ! ಅಯ್ಯೋ, ಇನ್ನೊಂದೋ, ಎರಡೋ ದಿನ ತಾಳಿದ್ದರೆ ಇದಕ್ಕೇನು ನಷ್ಟ ಉಂಟಾಗುತ್ತಿತ್ತೋ ಎಂಬಂತೆ ಇವತ್ತೇ ಕಾಣಿಸಿಕೊಳ್ಳಬೇಕೇ? ಗಂಡನಿಗೆ ಹೇಳಿದೆ. ಆತ ಇರುವ ಜಾಗಕ್ಕೇ ಇನ್ನೊಂದಷ್ಟು ರೆಂಬೆಕೊಂಬೆಗಳನ್ನು ಕಡಿದು ತಂದು ಪೇರಿಸಿ ಬೆಚ್ಚಗಿಡಲು ಪ್ರಯತ್ನಿಸುವುದಾಗಿ ಹೇಳಿ ಅತ್ತ ಹೋದ. ನಾನು ಕೈಚೀಲದಲ್ಲಿದ್ದ ಬಟ್ಟೆಗಳನ್ನು ಹಾಸಿ ಹೊದಿಸಿ ಮಗನನ್ನು ಬೆಚ್ಚಗಾಗಿಸಲು ಪ್ರಯತ್ನಿಸುತ್ತಿದ್ದೆ.

ಪ್ರಸವ ವೇದನೆ ಎಂಬುವುದು ತಡೆಯಲಾರದ ಒಂದು ಪ್ರಕ್ರಿಯೆಯಂತೆ ಉಪಕ್ರಮಿಸಿ ತನ್ನಿಂತಾನೇ ನಿರ್ಮಾಣಗೊಳ್ಳುತ್ತಿತ್ತು. ಯಾವಾಗ ನೋವು ಹೆಚ್ಚಾಯಿತೋ, ಗಂಡನು ಹೋದವನು ಇನ್ನೂ ಬರಲಿಲ್ಲವೋ, ಭಯಗೊಂಡು ಕೂಗಿ ಕೂಗಿ ಕರೆದೆ. ಗಂಟಲು ಹರಿಯುವಷ್ಟು ಕೂಗಿದರೂ ಅತ್ತಲಿಂದ ಒಂದೇ ಒಂದು ಸೊಲ್ಲಿಲ್ಲ. ಕಾಡಿನಲ್ಲಿ ನಾವೆಲ್ಲಿದ್ದೇವೆಂದು ತಿಳಿಯದೇ ಇನ್ನೆತ್ತಲೋ ಹೋಗಿಬಿಟ್ಟನೇ? ಯಾವುದಾದರೂ ಕ್ರೂರಪ್ರಾಣಿಗೆ ಆಹಾರವಾದನೇ? ಆ ಆಲೋಚನೆ ಬರುತ್ತಿದ್ದಂತೆಯೇ, ಚಳಿಗಲ್ಲದಿದ್ದರೂ ಭಯಕ್ಕೆ ಮತ್ತೆ ಮೈ ನಡುಗಲಾರಂಭಿಸಿತು. ಹುಲಿಯೋ, ಸಿಂಹವೋ ನಮ್ಮನ್ನು ಬಂದು ಆಪೋಶನ ತೆಗೆದುಕೊಂಡರೆ? ಪಾಪುವನ್ನು ತಬ್ಬಿಹಿಡಿದೆ. ತಬ್ಬಿದ ಬಿರುಸಿಗೆ ಬೆಚ್ಚಿದ ಕಂದ ಜೋರಾಗಿ ಅಳಲಾರಂಭಿಸಿತು. ಅಯ್ಯೋ, ಆ ಅಳುವನ್ನು ಕೇಳಿ ಆ ಪ್ರಾಣಿ ಇತ್ತ ಬಂದಾತೆಂದು ಹೆದರಿಸಿ ಬಾಯಿ ಮುಚ್ಚಿಸಿದೆ. ಆದರೆ ನನ್ನ ಎದೆಬಡಿತ ಮಾತ್ರ ಯಾವ ನಗಾರಿಗೂ ಕಡಿಮೆ ಇರದಂತೆ ಬಾರಿಸುತ್ತಿತ್ತು. ನಾನು ಸತ್ತರೂ ಪರವಾಗಿಲ್ಲ, ನನ್ನ ಕಂದನಿಗೇನೂ ಆಗದಿರಲಿ ತಂದೆ ಎಂದು ಪ್ರಲಾಪಿಸಿದೆ. ಸುಭದ್ರತೆಯ ಭಾವ ಆವರಿಸಿದ ಮಗ ಮಡಿಲಲ್ಲಿ ಮಲಗಿಬಿಟ್ಟ. ಆ ನಿದ್ದೆಯಲ್ಲೂ ಸುಖದ ಕನಸು ಕಾಣುತ್ತಾ ನಗುತ್ತಿರುವಾಗ್ಗೆ ನನಗೆ ಇನ್ನಿಲ್ಲದ ನೋವು ಕಾಡಿ ತೀವ್ರ ಒತ್ತಡದ ತುಡಿತದಲ್ಲಿ ನಲುಗಾಡಿದೆ. ನನ್ನ ನೋವಿನ ಅಳು ಕಿರುಚಾಟಕ್ಕೆ ಮಗುವಿನ ನಿದ್ದೆಗೆ ಭಂಗ ಬಾರದಿರಲಿ ಎಂದು ಧ್ವನಿಯನ್ನೇ ಹೊರಡಿಸದೇ ತಡೆದುಕೊಂಡೆ.



ಮಧ್ಯರಾತ್ರಿ ಕಳೆದು, ಬೆಳಗಿನ ಜಾವಕ್ಕೂ ಮುನ್ನ ಮಗುವಿನ ಜನನವಾಯಿತು. ನನ್ನ ನೋವು ಮರೆತು ಅದರ ಮುಖ ನೋಡಿ ನಲಿವನ್ನು ಮುಖದಲ್ಲಿ ಮೂಡಿಸಿಕೊಳ್ಳಲು ಪ್ರಯತ್ನಿಸಿದೆ. ಆದರೆ ಹುಟ್ಟುತ್ತಿದ್ದಂತೆಯೇ ಹೊರಡುತ್ತಿದ್ದ ಅದರ ಅಳುವಿನಿಂದ ದೊಡ್ಡ ಮಗ ನಿದ್ದೆಯಿಂದೆಲ್ಲಿ ತಿಳಿದೆದ್ದು ಬಿಟ್ಟಾನೋ ಎಂದು ಮಗುವಿನ ಬಾಯಿಯ ಮುಂದೆ ಕೈತಂದು ಅದರ ಅಳುವಿನ ಸದ್ದಿನ ಪ್ರಮಾಣವನ್ನು ಕಡಿಮೆ ಮಾಡಿದೆ. ಅಳಿದುಳಿದ ಬಟ್ಟೆಗಳಿಂದ ಅದರ ಮೈಕೈ ಒರೆಸಿ ಶುದ್ಧಮಾಡಿ, ಬೆಚ್ಚಗಿರಿಸಲು ಪ್ರಯತ್ನಿಸಿದೆ. ಯಾವಾಗ ಬಟ್ಟೆಯಲ್ಲಿ ಸುತ್ತಿಕೊಂಡು ಎದೆಗಾನಿಸಿಕೊಂಡೆನೋ ಆಗ ಮೊಲೆ ಚೀಪುತ್ತಾ ಸುಮ್ಮನಾಯಿತು.

ಬೆಳಕು ಹರಿಯಿತು. ಮಗನೂ ನಿದ್ದೆಯಿಂದೆದ್ದವನು ಹೊಸ ಮಗುವನ್ನು ಕಂಡು ಆಶ್ಚರ್ಯಚಕಿತನಾಗಿ ಮತ್ಸರದಿಂದೆಂಬಂತೆ ಇದು ಎಲ್ಲಿ ಸಿಕ್ಕಿತು ಎಂಬಂತೆ ಅನುಮಾನದಿಂದ ನನ್ನ ಮುಖ ನೋಡಿದ. ಅದು ಹಾಗೆ ಸಿಗುವುದಲ್ಲಪ್ಪ, ಇವನು ನಿನ್ನ ತಮ್ಮ, ನಿನ್ನೆ ರಾತ್ರಿ ಜೋರು ಮಳೆ ಬಂತಲ್ಲ, ಗುಡುಗು, ಸಿಡಿಲಿನ ಆರ್ಭಟಕ್ಕೆ ಭಯಪಟ್ಟು ಹೊಟ್ಟೆ ಒಳಗಿನಿಂದ